ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)

ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,

ಸೆಕ್ಟರ್ ನಂ-63, ನವನಗರ, ಬಾಗಲಕೋಟೆ-03

Tel:08354-297330

ಸ್ವಾತಂತ್ರ್ಯದ ಅಮೃತಮಹೋತ್ಸವ

HUBLI ELECTRICITY SUPPLY COMPANY LIMITED

(Wholly owned Govt. of Karnataka undertaking)

Superintending Engineer (Ele.)

O&M Circle, HESCOM, Sector No-63, Navanagar, Bagalkot-03

E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಬಿಜಿಕೆ/ಅಅ(ವಿ)/ಉಲೆನಿ/ಸಲೆ/ಹಿಸ-1/23-24/ 7937-7941 ದಿನಾಂಕ: 25 JAN 2024

**ದಿನಾಂಕ: 27-12-2023 ರಂದು ಬೆಳಗ್ಗೆ 11:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ,ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ., ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಗಳು.**

ಹಾಜರಿದ್ದವರು:

1. ಶ್ರೀ. ಖಲೀಂ ಅಹಮದ್, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟ.
2. ಶ್ರೀ. ವಿಶಾಲ ಧರೆಪ್ಪಗೋಳ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿ.
3. ಶ್ರೀಮತಿ. ಮುತ್ತವ್ವ ವಿಠ್ಠಲ ಸುತಾರ, ಅಂಬೇಡ್ಕರ್ ಸರ್ಕಲ್ ಹತ್ತಿರ, ಜಂಬಗಿ ರೋಡ್, ಜಮಖಂಡಿ ಜಿ॥ ಬಾಗಲಕೋಟೆ ರವರ ಪ್ರತಿನಿಧಿ ಶ್ರೀ ವಿಜು ವಿಠ್ಠಲ ಸುತಾರ ಗೈರು ಹಾಜರಾಗಿರುತ್ತಾರೆ.

<u>ಪ್ರಕರಣ ಸಂಖ್ಯೆ: 13/2023</u>

ಶ್ರೀಮತಿ. ಮುತ್ತವ್ವ ವಿಠ್ಠಲ ಸುತಾರ<br>ಪ್ರತಿನಿಧಿ: ಶ್ರೀ ವಿಜು ವಿಠ್ಠಲ ಸುತಾರ } ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),<br>ಕಾರ್ಯ ಮತ್ತು ಪಾಲನಾ ಉಪ-ವಿಭಾಗ<br>ಹುವಿಸಕಂನಿ., ಜಮಖಂಡಿ. } ------- ಪ್ರತಿವಾದಿ

**ವಿಷಯ: "ಡಿಜಿಟಲ್ ಮೀಟರ್ ನ್ನು ದುರಸ್ತಿಗೊಳಿಸುವ" ಕುರಿತು.**

*****

ಪ್ರಕರಣ ಸಂಖ್ಯೆ: 13/2023ಕ್ಕೆ ಸಂಬಂಧಿಸಿದಂತೆ, ದಿನಾಂಕ: 27-12-2023 ರಂದು ಬೆಳಿಗ್ಗೆ 11:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ, ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು/ಅಧಿಕಾರಿಗಳನ್ನು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**<u>ಶ್ರೀಮತಿ. ಮುತ್ತವ್ವ ವಿಠ್ಠಲ ಸುತಾರ, ಅಂಬೇಡ್ಕರ್ ಸರ್ಕಲ್ ಹತ್ತಿರ, ಜಂಬಗಿ ರೋಡ್, ಜಮಖಂಡಿ ಜಿ॥ ಬಾಗಲಕೋಟೆ ರವರ ಪ್ರತಿನಿಧಿ ಶ್ರೀ ವಿಜು ವಿಠ್ಠಲ ಸುತಾರ ಜಿ॥ ಬಾಗಲಕೋಟೆ ರವರ ದಿನಾಂಕ: 27-12-2023 ರಂದು ಏರ್ಪಡಿಸಿದ ಸಭೆಗೆ ಗೈರುಹಾಜರಾಗಿರುತ್ತಾರೆ.</u>**

ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಅಂಬೆಡ್ಕರ್ ಸರ್ಕಲ್ ನಲ್ಲಿರುವ ನಮ್ಮ ಮನೆಯ ಆರ್.ಆರ್. ಸಂಖ್ಯೆ: ಎಲ್

ವಾರ್ಷಿಕ ಸರಾಸರಿಯಾಗಿ ಕೇವಲ 65 ಯುನಿಟ್‌ನ್ನು ಮಾತ್ರ ಬಳಕೆ ಮಾಡುತ್ತಿದ್ದು, ಇದರಿಂದ ಅನುಮಾನಗೊಂಡ ನಾನು ಈ ಕುರಿತು ಹೆಸ್ಕಾಂನಲ್ಲಿ ಆನ್ ಲೈನ್ ಮೂಲಕ ದಿನಾಂಕ: 12-08-2023 ರಂದು ದೂರು ದಾಖಲಿಸಿದೆವು, ಸದರೀ ದೂರಿನನ್ವಯ ನಮಗೆ ಜಮಖಂಡಿ ಉಪ-ವಿಭಾಗ ಕಚೇರಿಗೆ ಹೋಗಿ ಮನವಿ ಸಲ್ಲಿಸಲು ಸೂಚಿಸಿದರು. ಮನಃ ನಮಗೆ ಸೆಪ್ಟಂಬರ್ ತಿಂಗಳಿಗೂ ಕೂಡ ಎತ್ತೇಚ್ಛವಾಗಿ ವಿದ್ಯುತ್ ಬಿಲ್ ನೀಡಿದ ಕಾರಣ ಸದರೀ ಡಿಜಿಟಲ್ ಮೀಟರ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿರಬಹುದೆಂದು ದಿನಾಂಕ: 03-10-2023 ರಂದು ಉಪ-ವಿಭಾಗ ಕಚೇರಿಗೆ ಡಿಜಿಟಲ್ ಮೀಟರ್‌ನ್ನು ದುರಸ್ತಿಗೊಳಿಸುವಂತೆ ಮನವಿ ಸಲ್ಲಿಸಿದರೂ ತಿಂಗಳುಗಳ ಕಾಲ ಅಧಿಕಾರಿಗಳು ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದೇ ದಿನಾಂಕ: 30-10-2023 ರಂದು ನಮ್ಮ ಮನೆಗೆ ಬಂದು ವಿದ್ಯುತ್ ಸಂಪರ್ಕ ಕಡಿತಗೊಳಿಸುವದಾಗಿ ಹೆದರಿಸಿ-ಬೆದರಿಸಿ ವಿದ್ಯುತ್ ಬಿಲ್‌ನ್ನು ತುಂಬಿಕೊಂಡಿದ್ದಾರೆ. ಇದರಿಂದ ನಾವು ಬಳಕೆ ಮಾಡಿದಿಕ್ಕಿಂತ ಹೆಚ್ಚಿನ ಮೊತ್ತವನ್ನು ತುಂಬಿದ್ದೇವೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೊಳ್ಳಬೇಕೆಂದು ದೂರು ಅರ್ಜಿ ಜೊತೆಗೆ ಲಗತ್ತಿಸಿದ ಲಿಖಿತ ಹೇಳಿಕೆ.

**ಶ್ರೀ. ವಿಶಾಲ ಧರೆಪ್ಪಗೋಳ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿ ರವರು ದಿನಾಂಕ: 27-12-2023 ರಂದು ನಡೆದ ಸಭೆಯಲ್ಲಿ ನೀಡಿದ ಹೇಳಿಕೆ**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಜಮಖಂಡಿ ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಎಲ್.ಟಿ.ಎಮ್.ಆರ್., ಉಪ-ವಿಭಾಗ ಹೆಸ್ಕಾಂ ಜಮಖಂಡಿ ರವರಿಗೆ ಮೀಟರ್ ತಪಾಸಣೆ ಮಾಡಲು ತಿಳಿಸಲಾಗಿತ್ತು. ಅದರಂತೆ, ದಿನಾಂಕ: 22-12-2023 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಎಲ್.ಟಿ.ಎಮ್.ಆರ್., ಉಪ-ವಿಭಾಗ ಹೆಸ್ಕಾಂ ಜಮಖಂಡಿ ರವರು ಮೀಟರ್ ಪರೀವೀಕ್ಷಣೆ ಮಾಡಿ ವರದಿ ಸಲ್ಲಿಸಿದ್ದು, ವರದಿಯಂತೆ ಮಾಪಕವು ಶೇ. 63.80% ರಷ್ಟು ದೋಷದಿಂದ ಕೂಡಿರುವ ಕಾರಣ ಮೀಟರ್ ಅನ್ನು ಬದಲಾವಣೆ ಮಾಡಲು ತಿಳಿಸಲಾಗಿತ್ತು ಹಾಗೂ ಗ್ರಾಹಕರಿಗೆ ಮೌಖಿಕವಾಗಿ ಮೀಟರ್ ಬದಲಾವಣೆಗೆ ಹಣ ಸಂದಾಯ ಮಾಡಲು ತಿಳಿಸಲಾಯಿತು. ದಿನಾಂಕ: 23-12-2023 ರಂದು ಮಾಪಕ ಬದಾವಣೆ ಮಾಡಲಾಗಿರುತ್ತದೆ ಎಂದು ತಿಳಿಸಿದರು.

**:: ಆ ದೇ ಶ ::**

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/ ದಿನಾಂಕ:

ಮೇಲಿನ ಅಂಶಗಳಿಂದ ಸದರಿ ಸೇವೆಗೆ ಸಂಬಂಧಿಸಿದ ಶಾಖಾಧಿಕಾರಿಗಳು ಮೀಟರ ತಪಾಸಣೆ ಮಾಡಿಸಿ ಮಾಪಕವು ದೋಷದಿಂದ ಕೂಡಿದ ಕಾರಣ ಈಗಾಗಲೇ ಬದಲಾವಣೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಇದರಿಂದ ಯಾವುದೇ ವೈಯಕ್ತಿಕ ಹಿತಾಸಕ್ತಿಯಿಂದ ವಿಳಂಬ ಮಾಡಿರುವದಿಲ್ಲ ಎಂಬುದು ಕಂಡುಬರುತ್ತದೆ. ಕಾರಣ ದೂರುದಾರರು ಕೋರಿರುವ ಪರಿಹಾರ ಕ್ರಮವಾದ ಅಧಿಕಾರಿ ಮೇಲೆ ಕ್ರಮಕೈಗೊಳ್ಳುವುದು ಮತ್ತು ಪರಿಹಾರ ಬೇಡಿಕೆಗಳನ್ನು ಈ ವೇದಿಕೆ ಪರಿಗಣಿಸಿರುವದಿಲ್ಲವೆಂದು ತಿಳಿಸುತ್ತಾ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಲಾಗಿದೆ.

**ಕಾರ್ಯನಿರ್ವಾಹಕ ಅಭಿಯಂತರರು(ವಿ),**
**ಹಾಗೂ ಗ್ರಾ.ಕುಂ.ಕೊ.ನಿ., ವೇದಿಕೆಯ**
**ಸದಸ್ಯರು, ಬಾಗಲಕೋಟ.**

24.1.24
**ಅಧ್ಯಕ್ಷರು,**
**(ಶ್ರೀ. ಸಿದ್ದಪ್ಪ ಬಿಂಜಗೇರಿ,)**
**ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ**
**ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ,**
**ಕಾ ಮತ್ತು ಪಾ ವೃತ್ತ ಹುವಿಸಕಂನಿ., ಬಾಗಲಕೋಟ.**

ಪ್ರತಿಯನ್ನು ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:

ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ.

ಪ್ರತಿ ಅಭಿವಂದನೆಗಳೊಂದಿಗೆ:

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.

ಪ್ರತಿಗಳು ಮಾಹಿತಿಗಾಗಿ:

1) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಜಮಖಂಡಿ ರವರ ಮಾಹಿತಿಗಾಗಿ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿ
3) ಶ್ರೀಮತಿ. ಮುತ್ತವ್ವ ವಿಠ್ಠಲ ಸುತಾರ, ಅಂಬೇಡ್ಕರ್ ಸರ್ಕಲ್ ಹತ್ತಿರ, ಜಂಬಗಿ ರೋಡ್, ಜಮಖಂಡಿ ಜಿ॥ ಬಾಗಲಕೋಟೆ ರವರ ಪ್ರತಿನಿಧಿ ಶ್ರೀ ವಿಜು ವಿಠ್ಠಲ ಸುತಾರ. ಮೋ ಸಂ: 9611127371

ಕಛೇರಿ ಪ್ರತಿ/ಪ್ರಧಾನ ಕಡತ.